# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 583
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)
3. ಉತ್ತರಿಸಬೇಕಾದ ದಿನಾಂಕ : 24-09-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ನಂಜನಗೂಡು ತಾಲ್ಲೂಕು ತಾಯೂರು ಸಮೀಪದ ಬನ್ನಹಳ್ಳಿ ಹುಂಡಿ ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶ ಎಷ್ಟು; (ವಿವರ ಒದಗಿಸುವುದು) ಈ ಯೋಜನೆಯು ಕಳೆದ ಐದಾರು ವರ್ಷಗಳಿಂದ ತಾಂತ್ರಿಕ ದೋಷದಿಂದ ಕೂಡಿದ್ದು, ನಾಲೆಗಳಿಗೆ ನೀರು ಹರಿಯದೇ ಅಚ್ಚುಕಟ್ಟುದಾರರು ಸಂಕಷ್ಟಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈಚೆಗೆ ಈ ಬಗ್ಗೆ ಅಚ್ಚುಕಟ್ಟುದಾರರು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆಯಿಂದ ಮೈಸೂರು ಜಿಲ್ಲೆಯ 3564.00 ಎಕರೆ ಮತ್ತು ಚಾಮರಾಜನಗರ ಜಿಲ್ಲೆಯ 816.00 ಎಕರೆ, ಒಟ್ಟಾರೆಯಾಗಿ 4380.00 ಎಕರೆ ಅರೆ ನೀರಾವರಿ ಬೆಳೆಗಳ ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುತ್ತದೆ.<br>2017-18ನೇ ಸಾಲಿನಲ್ಲಿ ಯೋಜನೆಯ ಪಂಪ್ ಮತ್ತು ಮೋಟಾರ್ ವ್ಯವಸ್ಥೆ ದುರಸ್ತಿಗೆ ಬಂದಿದ್ದು, ಸದರಿ ದುರಸ್ತಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ತದನಂತರ ದಿನಾಂಕ:08.08.2019 ರಿಂದ 12.08.2019 ರವರೆಗೆ ಕಬಿನಿ ನದಿಯಲ್ಲಿ ಸಂಭವಿಸಿದ ಭಾರಿ ಮಳೆಯಿಂದಾಗಿ ಉಂಟಾದ ಪ್ರವಾಹದಿಂದ, ಪಂಪ್ ಹೌಸ್‌ನ ಒಳಭಾಗದಲ್ಲಿ ನೀರು ತುಂಬಿಕೊಂಡಿದ್ದು, ಸದರಿ ಯೋಜನೆಯ ಒಳಭಾಗ ಮತ್ತು ಹೊರಭಾಗದ (Indoor & Outdoor Electrical System) ವಿದ್ಯುತ್ ಯಂತ್ರೋಪಕರಣಗಳು ಹಾನಿಗೊಳಗಾಗಿರುತ್ತದೆ.<br>ದಿನಾಂಕ: 16.08.2019 ರಂದು ಕಾವೇರಿ ನೀರಾವರಿ ನಿಗಮದ ವಿದ್ಯುತ್ ಸಲಹೆಗಾರರು ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆಯ ಪರಿವೀಕ್ಷಣೆ ಮಾಡಿ ನೀಡಿರುವ ಸಲಹೆ / ಸೂಚನೆಗಳಂತೆ, ಯೋಜನೆಯ ಯಂತ್ರೋಪಕರಣಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದ್ದು, ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. |
| ಆ | ಈ ಯೋಜನೆಯ ತಾಂತ್ರಿಕ ದೋಷಗಳನ್ನು ಪರಿಹರಿಸಿ, ನಾಲೆಗಳಿಗೆ ನೀರು ಬಿಡುಗಡೆ ಮಾಡಿ ರೈತರ ನೆರವಿಗೆ ಬರಲು ಕ್ರಮ ಜರುಗಿಸಲಾಗುವುದೇ? | ಈ ಯೋಜನೆಯ ತಾಂತ್ರಿಕ ದೋಷಗಳನ್ನು ಪರಿಹರಿಸಿ ಯೋಜನೆಯ ನಾಲೆಗಳಲ್ಲಿ ದಿನಾಂಕ 09.09.2020 ರಿಂದ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. |

***ಸಂಖ್ಯೆ:ಜಸಂಇ 124 ಎಲ್‌ಎಲ್‌ಎ 2020***

**(ರಮೇಶ್ ಲ. ಜಾರಕಿಹೊಳಿ)**
**ಜಲಸಂಪನ್ಮೂಲ ಸಚಿವರು**